

# ಚೆಸಪೀಕೆ ಕೊಲ್ಲಿ ಸೇತುವೆ ಸುರಂಗ

ಅಮೆರಿಕದ ಸಿವಿಲ್ ಇಂಜಿನಿಯರ್ಸ್ ಸೊಸೈಟಿಯವರು ವಿಶ್ವದ ಏಳು ಆಧುನಿಕ ತಾಂತ್ರಿಕ ವಿಸ್ಮಯಗಳಲ್ಲೊಂದು ಎಂದು ಪ್ರಶಸ್ತಿ ನೀಡಿರುವ, ಆಳ ಸಮುದ್ರದೊಳಗಿನ ಈ ಚೆಸಪೀಕೆ ಕೊಲ್ಲಿ ಸೇತುವೆ ಸುರಂಗ ನೋಡಿ ದಂಗಾದೆವು.

■ ಬಿ.ಪಿ. ಶಿವಮೂರ್ತಿ
ಚಿತ್ರ ಕೃಪೆ: ಅಂತರ್‌ಜಾಲ





ಅಮೆರಿಕದ ವರ್ಜಿನಿಯಾ ರಾಜ್ಯದಲ್ಲಿನ ವರ್ಜಿನಿಯಾ ಬೀಚ್ ಸಮೀಪ ಅಟ್ಲಾಂಟಿಕ್ ಸಾಗರದಿಂದ ಸೃಷ್ಟಿಯಾಗಿರುವ ಚೆಸಪೀಕೆ ಕೊಲ್ಲಿ ಇದು. ಕೊಲ್ಲಿಯ ಒಂದು ದಡದಿಂದ ಮತ್ತೊಂದು ದಡಕ್ಕೆ ಇರುವ ಬರೋಬರಿ 28.3 ಕಿ.ಮೀ ಅಂತರವನ್ನು ಸಂಪರ್ಕಿಸಲು ಸೇತುವೆ ಕಟ್ಟುವ ಕಲ್ಪನೆಯೇ ನಿಬ್ಬೆರಗುಗೊಳಿಸುವಂಥದು.

ಸಮರ ನೌಕೆ ಮತ್ತು ಇತರ ಹಡಗುಗಳ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ಸೇತುವೆ ನಿರ್ಮಾಣ ಮಾಡುವ ಸವಾಲು ಬೇರೆ. ಏಕೆಂದರೆ ಆ ಕೊಲ್ಲಿಯಿಂದ ಸ್ವಲ್ಪವೇ ದೂರದಲ್ಲಿ ಅಮೆರಿಕೆಯ ಮಿಲಿಟರಿ ನೌಕಾನೆಲೆಯೊಂದಿದೆ. ಮಿಲಿಟರಿ ನೌಕೆಗಳ ಸಂಚಾರಕ್ಕೆ ಸೇತುವೆಯಿಂದ ಅಡ್ಡಿಯಾಗುವುದಾದರೆ ಅನುಮತಿ ಕಷ್ಟ.

ಸೇತುವೆಯ ಮಧ್ಯದ ಸ್ವಲ್ಪ ಭಾಗವನ್ನು ಮೇಲಕ್ಕೆತ್ತುವ ಯಾಂತ್ರೀಕೃತ ವ್ಯವಸ್ಥೆ ಅಳಡಿಸಿ ಹಡಗುಗಳ ಓಡಾಟಕ್ಕೆ ಅವಕಾಶ ಮಾಡಿಕೊಡಬಹುದು. ಆದರೆ ಯುದ್ಧ ನೌಕೆ ಮತ್ತು ಇತರ ಹಡಗುಗಳ ಓಡಾಟ ಇಲ್ಲಿ ತುಂಬಾ ಜಾಸ್ತಿ. ಅಲ್ಲದೇ ಯಾವುದೇ ಕಾರಣಕ್ಕೆ ಸೇತುವೆಯನ್ನು ಮೇಲಕ್ಕೆತ್ತುವ ಯಾಂತ್ರೀಕೃತ ವ್ಯವಸ್ಥೆಯಲ್ಲಿ ವ್ಯತ್ಯಯವುಂಟಾದರೆ ಅಥವಾ ಸೇತುವೆಯೇನಾದರೂ ಕುಸಿದರೆ, ತುರ್ತು ಸಂದರ್ಭಗಳಲ್ಲಿ ಮಿಲಿಟರಿ ನೌಕಾಯಾನಕ್ಕೆ ಅಡಚಣೆಯುಂಟಾಗಿ, ದೇಶದ ಸುರಕ್ಷತೆಗೇ ಅಪಾಯ ಒದಗುವ ಸಂಭವ ಇರುತ್ತದೆ. ಇದೆಲ್ಲವನ್ನು ಮೀರಿ ಅತ್ಯಂತ ಸಾಹಸದ ನಿರ್ಧಾರದೊಂದಿಗೆ ಸೇತುವೆ ನಿರ್ಮಾಣಗೊಂಡಿದ್ದು ಈಗ ಇತಿಹಾಸ.

## ಸೇತುವೆ ಸುರಂಗದ ವೈಶಿಷ್ಟ್ಯ

ವಾಹನಗಳ ಓಡಾಟಕ್ಕಾಗಲೀ ಹಡಗುಗಳ ಸಂಚಾರಕ್ಕಾಗಲೀ ಯಾವುದೇ ಅಡಚಣೆಯುಂಟಾಗದಂತೆ ಈ ಚೆಸಪೀಕೆ ಕೊಲ್ಲಿಗೆ ಎರಡು ಸೇತುವೆ ನಿರ್ಮಿಸಿದ್ದಾರೆ. ಈ ಕಡೆಯಿಂದ ಹೋಗುವ ವಾಹನಗಳಿಗೊಂದು ಮತ್ತು ಆ ಕಡೆಯಿಂದ ಬರುವ ವಾಹನಗಳಿಗೆ ಮತ್ತೊಂದು. ಅಷ್ಟೇ ಅಲ್ಲ, ಈ ಒಂದೊಂದು ಸೇತುವೆಯಲ್ಲೂ ದ್ವಿಪಥ